# ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102

ದೂರವಾಣಿ: (08472) - 256767,239556,255564, ಫ್ಯಾಕ್ಸ್ : (08472) 227527

Email: hkadbgulb@gmail.com Website: hkrdb.kar.nic.in


ಸಂ: ಕ.ಕ.ಪ್ರ.ಅ.ಮಂ/ಸಿಬ್ಬಂದಿ/15/2019.20/5323 ದಿನಾಂಕ: 08.11.2021.

**ಪ್ರಕಟಣೆ**

ವಿಷಯ:- ಕ.ಕ.ಪ್ರ.ಅ.ಮಂಡಳಿ ಕಲಬುರಗಿ ಕಾರ್ಯಲಯದಲ್ಲಿ ಮಂಜೂರಾಗಿ ತೆರವಾಗಿರುವ ಹುದ್ದೆಗಳಿಗೆದುರಾಗಿ ನಿವೃತ್ತ ಅಧಿಕಾರಿ/ಸಿಬ್ಬಂದಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತು.

*~*~*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಂಡಳಿಯ ಕಾರ್ಯಲಯದಲ್ಲಿ ಮಂಜೂರಾಗಿ ತೆರವಾಗಿರುವ ಹುದ್ದೆಗಳಿಗೆದುರಾಗಿ ಈ ಕೆಳಕಂಡ ಹುದ್ದೆಗಳ ಅವಶ್ಯಕತೆ ಇರುತ್ತದೆ. ಅದರಂತೆ ಅವಶ್ಯವಿರುವ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಪಡೆದು ಕೊಳ್ಳಲಾಗುವುದು. ಸದರಿ ಹುದ್ದೆಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂಖ್ಯೆ | ಹುದ್ದೆ | ಸಂಖ್ಯೆ | ಸಾಮರ್ಥ್ಯ |
|---|---|---|---|
| 1] | ಕಾರ್ಯನಿರ್ವಾಹಕ ಅಭಿಯಂತರರು | 01 | • ಕಾರ್ಯನಿರ್ವಾಹಕ ಅಭಿಯಂತರರು / ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಸಮಾನಾದ ಹುದ್ದೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ನಿವೃತ್ತ ಅಭಿಯಂತರರು.<br>• PWD, PRED, MI, RWS, KUWS&DB & KRIDL ಇಲಾಖೆಗಳ ಮತ್ತು ನಿಗಮ / ಮಂಡಳಿಗಳಲ್ಲಿ ಕರ್ತವ್ಯ ನಿರ್ವಹಿಸಿರುವವರಿಗೆ ಆದ್ಯತೆ ನೀಡಲಾಗುವುದು. |
| 2] | ಸಹಾಯಕ ಅಭಿಯಂತರರು | 04 | • ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು / ಕಿರಿಯ / ಸಹಾಯಕ ಅಭಿಯಂತರರ ಸಮಾನಾದ ಹುದ್ದೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ನಿವೃತ್ತ ಅಭಿಯಂತರರು.<br>• PWD, PRED, MI, RWS, KUWS&DB & KRIDL ಇಲಾಖೆಗಳ ಮತ್ತು ನಿಗಮ / ಮಂಡಳಿಗಳಲ್ಲಿ ಕರ್ತವ್ಯ ನಿರ್ವಹಿಸಿರುವವರಿಗೆ ಆದ್ಯತೆ ನೀಡಲಾಗುವುದು. |
| 3] | ಲೆಕ್ಕಾಧೀಕ್ಷಕರು | 01 | • ಲೆಕ್ಕಾಧೀಕ್ಷಕರು/ ಪ್ರ.ದ, ಲೆಕ್ಕ ಪರಿಶೋಧನಾಧಿಕಾರಿಗಳ ಸಮಾನಾದ ಹುದ್ದೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ನಿವೃತ್ತ ಅಧಿಕಾರಿಗಳು.<br>• ಸ್ಥಳೀಯ ಲೆಕ್ಕಪರಿಶೋಧನಾ ಇಲಾಖೆ, ಪ್ರಾದೇಶಿಕ ಕಚೇರಿ, PWD, ZP, PRED, MI, RWS, KUWS&DB ಗಳಲ್ಲಿ ಕರ್ತವ್ಯ ನಿರ್ವಹಿಸಿರುವವರಿಗೆ ಆದ್ಯತೆ ನೀಡಲಾಗುವುದು. |
| 4] | ಸಹಾಯಕ ಸಾಂಖ್ಯಿಕ ಅಧಿಕಾರಿ | 03 | • ಸಹಾಯಕ ಸಾಂಖ್ಯಿಕ ಅಧಿಕಾರಿ/ಸಾಂಖ್ಯಿಕ ನೀರಿಕ್ಷಕರ ಸಮಾನಾದ ಹುದ್ದೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ನಿವೃತ್ತ ಅಧಿಕಾರಿಗಳು. |

| | | | |
|---|---|---|---|
| | | | • ZP, DHO, PRE, RWS, MI, PWD, DSO, CORPORATION, ವಾಣಿಜ್ಯ ತೆರಿಗೆ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸಿರುವವರಿಗೆ ಆದ್ಯತೆ ನೀಡಲಾಗುವುದು. |
| 5] | ಸಾಂಖ್ಯಿಕ ನೀರಿಕ್ಷಕರು | 02 | • ಸಾಂಖ್ಯಿಕ ನೀರಿಕ್ಷಕರು/ಗಣತಿದಾರರ ಸಮಾನಾದ ಹುದ್ದೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ನಿವೃತ್ತ ಸಿಬ್ಬಂದಿಗಳು.<br>• DSO, TP, MI & ತಹಸೀಲ ಕಾರ್ಯಲಯ ಇಲಾಖೆಗಳ ಕರ್ತವ್ಯ ನಿರ್ವಹಿಸಿರುವವರಿಗೆ ಆದ್ಯತೆ ನೀಡಲಾಗುವುದು. |
| 6] | ದ್ವಿತಿಯ ದರ್ಜೆಯ ಸಹಾಯಕರು | 03 | • ದ್ವಿ.ದ.ಸಹಾಯಕ ಸಮಾನಾದ ಹುದ್ದೆಯಲ್ಲಿ ಕನಿಷ್ಠ 05 ವರ್ಷಗಳ ಅನುಭವ ಹೊಂದಿರುವ ನಿವೃತ್ತ ಸಿಬ್ಬಂದಿಗಳು.<br>• ತಹಸೀಲ ಕಾರ್ಯಲಯ, ಸಹಾಯಕ ಆಯುಕ್ತರ ಕಾರ್ಯಲಯ, ಜಿಲ್ಲಾಧಿಕಾರಿಗಳ ಕಾರ್ಯಲಯ & ಪ್ರಾದೇಶಿಕ ಆಯುಕ್ತರ ಕಾರ್ಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸಿರುವವರಿಗೆ ಆದ್ಯತೆ ನೀಡಲಾಗುವುದು. |
| 7] | ಜ್ಯೂನಿಯರ್ ಪ್ರೋಗ್ರಾಮರ್ | 04 | MCA, MSc(CS)<br>HTML, C#, ASP.NET, MSSQL, (02 years experience)<br>(ಗೌರವ ಧನ ರೂ. 15,000.00) |
| 8] | ಕಂಪ್ಯೂಟರ್ ಆಪರೇಟರ್ | 05 | 1] ಯಾವುದೇ ಪದವಿ,<br>2] ಕಡ್ಡಾಯವಾಗಿ ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್<br>3] ಕಡ್ಡಾಯವಾಗಿ ಯಾವುದೇ ಸರಕಾರದ ಕಚೇರಿಗಳಲ್ಲಿ ಒಂದು ವರ್ಷ ಕರ್ತವ್ಯ ನಿರ್ವಹಿಸಿರಬೇಕು (ಸಂಭಾವನೆ ಕನಿಷ್ಠ ವೇತನ ಕಾಯ್ದೆ ಅನ್ವಯ) |

ಸದರಿ ನಿವೃತ್ತ ಅಧಿಕಾರಿ/ಸಿಬ್ಬಂದಿಯವರನ್ನು ಈ ಕೆಳಗಿನಂತೆ ಷರತ್ತುಗಳ ಅನ್ವಯ ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲಾಗುತ್ತದೆ.

**1] ನಿವೃತ್ತ ಅಧಿಕಾರಿ/ಸಿಬ್ಬಂದಿಯವರ ವಯಸ್ಸು 65 ವರ್ಷ ಮೀರಿರಬಾರದು.**

**2] ನಿವೃತ್ತ ಅಧಿಕಾರಿ/ಸಿಬ್ಬಂದಿಯವರು ತಮ್ಮ ಪಿಂಚಣಿ ಪತ್ರದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.**

**3] ನಿವೃತ್ತ ಅಧಿಕಾರಿ/ಸಿಬ್ಬಂದಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ಗರಿಷ್ಠ ಒಂದು ವರ್ಷದ ಅವಧಿಗೆ ಮಾತ್ರ ಪಡೆದುಕೊಳ್ಳಲಾಗುವುದು.**

**4] ನಿವೃತ್ತ ಅಧಿಕಾರಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.**

**5] ನಿವೃತ್ತ ಅಧಿಕಾರಿ/ಸಿಬ್ಬಂದಿಯವರು ಅವರು ನೀಡುವ ಸೇವೆಯ ಆಧಾರದ ಮೇಲೆ ಅವರ ಸೇವೆಯನ್ನು ಮುಂದುವರೆಸುವ ಹಾಗೂ ಸದರಿಯವರ ಕಾರ್ಯಕ್ಷಮತೆಯಲ್ಲಿ ಸೂಕ್ತತೆ ಇಲ್ಲದಿದ್ದರೆ ಅವರ ಸೇವೆಯನ್ನು ರದ್ದುಪಡಿಸುವ ಅಧಿಕಾರ ಪ್ರಾಧಿಕಾರಿಗಳಿಗೆ ಇರುತ್ತದೆ.**

ಆದ್ದರಿಂದ ಆಸಕ್ತಿಯುಳ್ಳ ನಿವೃತ್ತ ಅಧಿಕಾರಿ/ಸಿಬ್ಬಂದಿಯವರು ಹಾಗೂ ಅಭ್ಯರ್ಥಿಗಳು ತಮ್ಮ ಬಯೋಡೆಟಾ ಹಾಗೂ ಅವಶ್ಯಕ ದಾಖಲಾತಿಗಳೊಂದಿಗೆ ಈ ಕಾರ್ಯಾಲಯದಲ್ಲಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 17.11.2021 ರಂದು ಸಾಯಂಕಾಲ 5.30 ರೊಳಗೆ (ರಜಾದಿನ ಹೊರತುಪಡಿಸಿ)** ಕಛೇರಿ ವೇಳೆಯಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿಯ ಕೆಲಸದ ದಿನಗಳಲ್ಲಿ ಸಂಪರ್ಕಿಸಿ, ಪಡೆದುಕೊಳ್ಳಬಹುದಾಗಿದೆ.

ಕಾರ್ಯದರ್ಶಿಗಳು
ಕ ಕ ಪ್ರ ಅ ಮಂಡಳಿ ಕಲಬುರಗಿ